ಸಹಕಾರವು ಮನುಕುಲದ ಸಹಜ ಧರ್ಮ

ಸೇಡಂನಲ್ಲಿ ನಡೆದ ಅಖಿಲ ಭಾರತ 69ನೇ ಸಹಕಾರ ಸಪ್ತಾಹದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

- **ಕನ್ನಡಪ್ರಭ ವಾರ್ತೆ** ಸೇಡಂ

ಸೇಡಂನಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರು ಅಖಿಲ ಭಾರತ 69ನೇ ಸಹಕಾರ ಸಪ್ತಾಹ ಉದ್ಘಾಟಿಸಿದರು.

ಮನುಷ್ಯ ಸಂಘ ಜೀವಿ ಮನುಷ್ಯನ ಜೀವನದ ಪ್ರತಿ ಹಂತವು ಸಮಾಜದೊಂದಿಗಿನ ಪರಸ್ಪರ ಸಹಕಾರದ ಮೇಲೆ ಅವಲಂಬನೆಯಾಗಿದೆ. ಹಾಗಾಗಿ ಸಹಕಾರವು ಮನುಕುಲದ ಸಹಜ ಹಾಗು ನೈಜ ಧರ್ಮ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ಇಂದು ಸೇಡಂ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಸಹಕಾರ ಮಹಾಮಂಡಳ ಕರ್ನಾಟಕ, ಬೆಂಗಳೂರು, ಕಲಬುರಗಿ-ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ನೇತ್ರತ್ವದಲ್ಲಿ ಕರ್ನಾಟಕ ರಾಜ್ಯ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ, ಕರ್ನಾಟಕ ರಾಜ್ಯ ಸಹಕಾರ ಕೈಗಾರಿಕಾ ಮಹಾಮಂಡಳ ನಿಯಮಿತ, ಹಾಪ್‌ಕಾಮ್ಸ್, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ, ಕಲಬುರಗಿ ಜಿಲ್ಲಾ ಸಹಕಾರ ಯೂನಿಯನ್, ಕಲಬುರಗಿ ಪ್ರಾಂತ್ಯದ ವಿವಿಧ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ 2022 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಾವು ಭಾರತೀಯರು ಎನ್ನುವುದೇ ನಮ್ಮ ಅಸ್ತಿತ್ವ ಇಡೀ ನಮ್ಮ ಬದುಕೇ ಸಹಕಾರದ ಮೇಲೆ ಆಧಾರವಾಗಿದೆ. ಸಹಕಾರದಿಂದ ಏನನ್ನಾದರೂ ಸಾಧಿಸಬಹುದು ಎಂದರು.

ಮುಚ್ಚುವ ಹಂತದಲ್ಲಿದ್ದ ಕಲಬುರಗಿ ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಪುನಶ್ಚೇತನಗೊಳಿಸಿ ಇಲ್ಲಿಯವರೆಗೆ 2 ಲಕ್ಷ ರೈತರಿಗೆ ಸಾಲ ಕೊಟ್ಟ ಬ್ಯಾಂಕಿನ ಅಧ್ಯಕ್ಷ ಸೇಡಂ ಶಾಸಕ ರಾಜಕುಮಾರ ಪಾಟೀಲ ತೆಲ್ಕೂರ್ ಅವರು ರೈತರ ಬದುಕು ಉದ್ಧಾರದ ಕೆಲಸ ಮಾಡಿದ್ದಾರೆ. ಇದು ಬಹು ದೊಡ್ಡ ಕೊಡುಗೆ ಎಂದು ಶಾಸಕ ತೇಲಕೂರ್ ಕೆಲಸಗಳನ್ನು ಶ್ಲಾಘಿಸಿದ ಅವರು ಕನ್ನಡ ನಾಡಿನ ರಾಷ್ಟ್ರಕೂಟರ ನೆಲದ ಅಸ್ತಿತ್ವವನ್ನು ಉಳಿಸಿದ್ದಾರೆ ಎಂದರು.

ರಾಜ್ಯದ 32 ಲಕ್ಷ ರೈತರಿಗೆ 24 ಸಾವಿರ ಕೋಟಿ ಸಾಲ ನೀಡುವ ತೀರ್ಮಾನವನ್ನು ನಮ್ಮ ಸರಕಾರ ತೆಗೆದುಕೊಂಡಿದೆ ಇದು ನಮ್ಮ ಸರಕಾರ ಸಹಕಾರ ಕ್ಷೇತ್ರಕ್ಕೆ ಮತ್ತು ರೈತರಿಗೆ ಕೊಟ್ಟ ಕೊಡುಗೆಯಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಭೂಮಿ ಅಷ್ಟೇ ಇದೆ ಆದರೆ ಜನ ಸಂಖ್ಯೆ ಹೆಚ್ಚಾಗಿದೆ ಅದಕ್ಕೆ ತಕ್ಕಂತೆ ಆಹಾರ ದಾನ್ಯಗಳ ಬೆಳೆ ಹೆಚ್ಚಾಗಬೇಕಾದರೆ ರೈತ ಗಟ್ಟಿಯಾಗಬೇಕು. ರೈತನ ಬದುಕು ಹಸನಾಗಬೇಕಾದರೆ ರೈತನಿಗೆ ಸ್ಕೇಲ್ ಆಫ್ ಫೈನಾನ್ಸ್ ಆಧಾರದಲ್ಲಿ ಬೆಳೆದ ಬೆಳೆಗೆ ದರ ನಿರ್ಧಾರವಾಗಬೇಕು ಆ ಮೂಲಕ ರೈತ ಸ್ವಾವಲಂಭಿಯಾಗಬೇಕು ಎಂದ ಅವರು ಸ್ವಾಭಿಮಾನವಿಲ್ಲದಲ್ಲಿ ಆತ್ಮಾಭಿಮಾನವಿಲ್ಲ, ಆತ್ಮಾಭಿಮಾನವಿಲ್ಲದಲ್ಲಿ ಸಾಧನೆಯಿಲ್ಲ. ಈ ನಿಟ್ಟನಲ್ಲಿ ಕಾಯಕ ಯೋಜನೆಗಳ ಅನುಷ್ಠಾನವಾಗಬೇಕು. ರೈತರಿಗೆ ಅಲ್ಪಾವಧಿ ಸಾಲ ವಿತರಣೆಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ರಾಜ್ಯ ಸಹಕಾರ ಮಹಾಮಂಡಳ ದ ಅಧ್ಯಕ್ಷರಾದ ಜಿಟಿ ದೇವೇಗೌಡ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ, ಕೇಂದ್ರ ಸಚಿವ ಭಗವಂತ ಖೂಬಾ, ಸಂಸದ ಉಮೇಶ ಜಾಧವ ಮಾತಬಾಡಿದರು.

ಸೇಡಂ ಶಾಸಕ ಹಾಗು ಡಿಸಿಸಿ ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಪಾಟೀಲ ತೆಲ್ಕೂರ್ ಮಾತನಾಡಿ ದಿವಾಳಿ ಅಂಚಿನಲ್ಲಿದ್ದ ಬ್ಯಾಂಕ್ ಒಂದೇ ವರ್ಷದಲ್ಲಿ ರೈತರಿಗೆ ಸಾಲ ನೀಡುವ ಹಂತಕ್ಕೆ ಬಂದು 1, 013 ಕೋಟಿ ಸಾಲ ವಿತರಿಸಲು ಸಕ್ಷಮವಾದ ಬಗ್ಗೆ ಎಳೆ ಎಳೆಯಾಗಿ ಬಿಚ್ಚಿಟ್ಟರು.

ವೇದಿಕೆಯಲ್ಲಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ, ಶಾಸಕರಾದ ರಾಜುಗೌಡ, ಬಾಬುರಾವ ಚಿಂಚನಸೂರ, ಬಸವರಾಜ ಮತ್ತಮೂಡ, ಡಾ.ಅವಿನಾಶ ಜಾಧವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿದ್ದ 93 ವರ್ಷದ ಮಾಜಿ ಉಪಸಭಾಪತಿ ಚಂದ್ರಶೇಖರರೆಡ್ಡಿ ಮದನಾ ದೇಶಮುಖರನ್ನು ಮುಖ್ಯನಂತ್ರಿಗಳು ಸನ್ಮಾನಿಸಿದರು. ಸೇಡಂ ಶಾಸಕ ರಾಜಕುಮಾರ್ ಪಾಟೀಲ್ ತೆಲ್ಕೂರ್ ಮತ್ತು ಇತರ ಹದಿಮೂರು ಜನ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯ್ತು.

ಡಾ.ಅಪ್ಪಾಗೆ ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿ ನೀಡಿ

ಡಾ. ಶರಣಬಸವಪ್ಪ ಅಪ್ಪಾ 88ನೇ ಜನ್ಮದಿನೋತ್ಸವದಲ್ಲಿ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಒತ್ತಾಯ

- **ಕನ್ನಡಪ್ರಭ ವಾರ್ತೆ** ಕಲಬುರಗಿ

ಕಲಬುರಗಿ ಶರಣಬಸವೇಶ್ವರ ಸಂಸ್ಥಾನದ ಮಹಾದಾಸೋಹ ಪೀಠಾಧಿಪತಿ ಹಾಗೂ ಶರಣಬಸವ ವಿವಿ ಕುಲಾಧಿಪತಿ ಡಾ.ಶರಣಬಸವಪ್ಪ ಅಪ್ಪಾಜಿಯವರಿಗೆ ಸಮಾಜ ಸೇವೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರು ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕೆಂದು ಶ್ರೀಶೈಲಂನ ಸಾರಂಗ ಮಠದ ಜಗದ್ಗುರು ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಆಗ್ರಹಿಸಿದ್ದಾರೆ.

ನಗರದ ಶರಣಬಸವೇಶ್ವರ ದಾಸೋಹ ಮಹಾಮನೆಯಲ್ಲಿ ಸೋಮವಾರ ನಡೆದ ಡಾ. ಅಪ್ಪಾಜಿಯವರ 88ನೇ ಜನ್ಮದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಈ ಮಠಾಧೀಶರ ಕೊಡುಗೆಯನ್ನು ಪರಿಗಣಿಸಿದರೆ ಡಾ.ಅಪ್ಪಾಜಿ ಪದ್ಮಭೂಷಣ ಮತ್ತು ಪದ್ಮ ಪ್ರಶಸ್ತಿಗೆ ಅರ್ಹರಾಗಿದ್ದಾರೆ. ಆದಾಗ್ಯೂ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ವಿಷಯ ತಿಳಿದಿದ್ದು ಈ ಗೌರವಗಳನ್ನು ಅವರಿಂದ ನಿರಾಕರಿಸಲಾಗುತ್ತಿದೆ. ಈ ಹಿಂದೆ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಅಧಿಕಾರದಲ್ಲಿದ್ದಾಗ ತಾವು ಆಯಾ ಮುಖ್ಯಮಂತ್ರಿಗಳಿಗೆ ಈ ವಿಷಯವಾಗಿ ಮನವಿ ಮಾಡಿದ್ದೆ. ಈಗಿನ ಸಿಎಂ ಬೊಮ್ಮಾಯಿ ಅವರಿಗೆ ಡಾ.ಅಪ್ಪಾಜಿಯವರಿಗೆ ಪದ್ಮಶ್ರೀ ನೀಡಿ ಗೌರವಿಸಬೇಕೆಂದರು.

ಕಲಬುರಗಿ ಶಾಸಕ, ಕೆಕೆಆರ್‌ಡಿಬಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ್ ಅವರಿಗೆ ಮನವಿ ಮಾಡಿದ ಶ್ರೀಗಳು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಸರ್ವಪಕ್ಷ ನಿಯೋಗ ಹಾಗೂ ಈ ಭಾಗದ ಸ್ವಾಮೀಜಿಗಳ ನಿಯೋಗ ಬೆಂಗಳೂರಿಗೆ ತೆರಳಬೇಕು ಹಾಗೂ ಡಾ.ಅಪ್ಪಾಜಿಯವರಿಗೆ ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಲು ಒಟ್ಟಾಗಿ ಮನವಿ ಮಾಡಬೇಕೆಂದರು.

ಡಾ.ಅಪ್ಪಾಜಿಯವರ 88ನೇ ಜನ್ಮದಿನಾಚರಣೆಯಲ್ಲಿ ಅನೇಕರು ಪಾಲ್ಗೊಂಡು ಅವರನ್ನು ಸತ್ಕರಿಸಿದರು. ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ, ಸಂಸ್ಥಾನದ 9ನೇ ಪೀಠಾಧಿಪತಿ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ, ಭವಾನಿ, ಶಿವಾನಿ, ಮಹೇಶ್ವರಿ ಇದ್ದರು. ಡಾ ಅಪ್ಪಾಜಿಯವರ 88ನೇ ಜನ್ಮದಿನಾಚರಣೆಯ ಸಾಂಕೇತಿಕವಾಗಿ 88 ದೀಪಗಳಿಂದ ಕೂಡಿದ ಆರತಿಯನ್ನು ಕುಟುಂಬದವರೆಲ್ಲರೂ ಸೇರಿ ಬೆಳಗಿದರು.

ಶರಣಬಸವ ವಿವಿ ಉಪಕುಲಪತಿ ಡಾ.ನಿರಂಜನ್ ನಿಷ್ಠಿ, ಕುಲಸಚಿವ ಡಾ. ಅನೀಲ ಕುಮಾರ್ ಬಿಡವೆ ಮಾತನಾಡಿ ಶರಣಶಿರಸಗಿ ಗ್ರಾಮದಲ್ಲಿ ಶರಣಬಸವ ವಿಶ್ವವಿದ್ಯಾಲಯ ಸ್ಥಾಪನೆಗೆ ಉದ್ದೇಶಿಸಿರುವ ಜಾಗದಲ್ಲಿ ರಸ್ತೆ ನಿರ್ಮಿಸಲು ಕೆಕೆಆರ್‌ಡಿಬಿ ನಿಧಿಯಿಂದ 3 ಕೋಟಿ ರು. ಮಂಜೂರು ಮಾಡಿದ್ದಕ್ಕಾಗಿ ಶಾಸಕ ರೇವೂರ ಅವರಿಗೆ ಧನ್ಯವಾದ ತಿಳಿಸಿದರು. ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಹುಟ್ಟುಹಬ್ಬದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಚೌಡಾಪುರಿ ಮಠದ ಡಾ.ರಾಜಶೇಖರ ಶಿವಾಚಾರ್ಯರು, ಮಾಜಿ ಎಂಎಲ್‌ಸಿ ಅಲ್ಲಮಪ್ರಭು ಪಾಟೀಲ ಸೇರಿ ಹಲವರಿದ್ದರು.

ಶ್ರೀ ಪಟ್ಟಾಭಿರಾಮ ಗ್ರಾಮಾಂತರ ವಿದ್ಯಾವರ್ಧಕ ಸಂಘ (ರಿ.)

ರಾಮನಾಥಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ- 573133

ನೇಮಕಾತಿ ಪ್ರಕಟಣೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್ ವೃತ್ತ, ಬೆಂಗಳೂರು, ಇದರ ಆದೇಶ ಸಂಖ್ಯೆ : ಸಿ8(4)ಶಾಶಿಆ.ಖಾ.ಹು.ಭ.ಅನು/ಇ-914521/2022-23 ದಿ: 05-11-2022ರ ಪ್ರಕಾರ ನಮ್ಮ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀಪಟ್ಟಾಭಿರಾಮ ಗ್ರಾಮಾಂತರ ಪ್ರೌಢಶಾಲೆ, ರಾಮನಾಥಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ಇಲ್ಲಿ ಖಾಲಿ ಇರುವ ಸಂಸ್ಕೃತ ಸಹಶಿಕ್ಷಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ. ಸಂ	ಹುದ್ದೆಯ ಹೆಸರು	ಅನುಮತಿಸಿದ ವಿಷಯ ಮತ್ತು ವಿದ್ಯಾರ್ಹತೆ	ಮೀಸಲಾತಿ
1	ಸಹಶಿಕ್ಷಕ	ಸಂಸ್ಕೃತ (ಐಚ್ಛಿಕ ವಿಷಯ) ಬಿ.ಎ., ಬಿ.ಇಡಿ.	ಏಕವೃಂದ ಹುದ್ದೆ ಮೀಸಲಾತಿ ಅನ್ವಯಿಸುವುದಿಲ್ಲ

ಆಸಕ್ತ ಅಭ್ಯರ್ಥಿಗಳು ಪೂರ್ಣಮಾಹಿತಿ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಈ ಜಾಹಿರಾತು ಪ್ರಕಟಣೆಯಾದ 21 ದಿನಗಳ ಒಳಗಾಗಿ ಈ ಕೆಳಗೆ ಕಾಣಿಸಿದ ಕಾರ್ಯದರ್ಶಿಗಳ ವಿಳಾಸಕ್ಕೆ ಅರ್ಜಿ ಸಲ್ಲಿಸಿ, ಅರ್ಜಿಯ ಮತ್ತೊಂದು ಪ್ರತಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ -573201, ಇವರಿಗೆ ಸಲ್ಲಿಸತಕ್ಕದ್ದು. ಅಭ್ಯರ್ಥಿಯ ಆಯ್ಕೆಯು ಇಲಾಖೆಯ ನಿಯಮಕ್ಕೆ ಒಳಪಟ್ಟಿರುತ್ತದೆ. ಅಪೂರ್ಣ ಮತ್ತು ನಿಗದಿತ ಅವಧಿಯೊಳಗೆ ತಲುಪದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸಂದರ್ಶನದ ದಿನಾಂಕ 9-12-2022 ಅರ್ಹ ಅಭ್ಯರ್ಥಿಗಳು ಮೂಲಪ್ರಮಾಣಪತ್ರಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು. ಸಂದರ್ಶನದ ಬಗ್ಗೆ ಆಡಳಿತ ಮಂಡಳಿಯವರು ಪತ್ರವ್ಯವಹಾರ ಮಾಡುವುದಿಲ್ಲ.

ಸ್ಥಳ:ರಾಮನಾಥಪುರ
ದಿನಾಂಕ:15-11-2022

ಸಹಿ/- ಕಾರ್ಯದರ್ಶಿಗಳು
ಶ್ರೀಪಟ್ಟಾಭಿರಾಮ ಗ್ರಾಮಾಂತರ ವಿದ್ಯಾವರ್ಧಕ ಸಂಘ(ರಿ.)
ರಾಮನಾಥಪುರ, ಅರಕಲಗೂಡು ತಾಲ್ಲೂಕು, ಹಾಸನಜಿಲ್ಲೆ

PUBLIC NOTICE

This is to inform to the public in general that **NISHANT KESARE S/o ASHOK KESARE** is the absolute owner and possessor of Plot No. 165 'G' Type measuring totally 2400 Sq.ft., (CTS No. 2467 part) situated in the approved layout land Sy No. 20 of Badepur Sedam Road, Extension Scheme, CMC Layout, Kalaburagi, by virtue of the Regd Sale Deed vide Doct. No. 10087/2021-22 dated: 02.11.2021.

That the previous Original Mother Deed/ Sale Deed vide Doct. No. 1450/1987-88 dated: 30.07.1987 in respect of above said property/plot is lost in transit. That NISHANT KESARE S/o ASHOK KESARE is availing loan and also Mortgaging the said property in favour of Canara Bank Kalaburagi.

If any person has got any right, title interest over the above said property/plot can submit their objections along with documents to the counsel Sri. S.S. Aspalli, Advocate # Vasant Nagar, Kalaburagi & also to the Canara Bank Regional Office SB Temple Road, Kalaburagi, within 7 days from the date of publication.

Hence this Public Notice

S.S. Aspalli, Advocate
Vasant Nagar, Near Govt Press,
MSK Mill Road, Kalaburagi.
Cell 9448347914

Date: 14-11-2022 Place : Kalaburagi

CHANGE OF NAME

I, **MOHAMMAD SALEEMUDDIN S/O MOHAMEMD GOUSE** R/o, H.No.1-9-96 Mominpura Gurumitkal Tq: Gurumatakal Dist: Yadgiri Karnataka Solemnly affirm state that **MOHAMMAD SALEEMUDDIN S/O MOHAMEMD GOUSE** and **HUZUUR MOHAMMAD SALEEMUDDIN S/O MOHAMEMD GOUSE** Both names are one and same for all purposes vide affidavit dated: 09-11-2022 sworn before notary M S Shekhar at Yadgiri

---

IN THE COURT OF THE HON'BLE J.M.F.C AT MANVI

CRI. MISC NO. 843/2022

Petitioner : Nannebee and Others
V/s
Respondents : The Tahasildar Manvi and All Concerned

CITATION

Claim : DEATH CERTIFCATE

WHEREAS in the above case the petitioner has filed Petition U/sec. 10(3) R/w Sec 13 (3) of Karnataka Birth and Death Act 1969 on the file of this Court at Manvi Claiming the Death Certificate of Petitioner husband by Name **Late. BANDESAB s/o HASANSAB he was Died on 31-06-1978** at his own resident of Kharabdinni Village. Tq: Manvi.

All the concerned if interested in the matter hereby warned to appear on or before the 15th day Dec-2022 at 11.00 am and to produce all the documents support of your claim.

Take Notice that in default of your appearance from the Date mentioned above the case will heard and determined in your absence.

Give in under my hand and seal of the court this 14-11-2022at Manvi.

PLACE : MANVI
Date: 10/11/2022

BY ORDER OF THE COURT
Sd/- VENKOBA
CHIEF MINISTERIAL OFFICER
J.M.F.C Court, Manvi

THROUGH
Shakeel Badai, Advocate Manvi


74ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು

ಆಳಂದ ತಾಲೂಕಿನ ಭಗೀರಥ,
ಅಭಿವೃದ್ಧಿಯ ಹರಿಕಾರರು,
ದೂರದೃಷ್ಟಿಯುಳ್ಳ ಜನಪರ,
ಜೀವಪರ ಚಿಂತಕರು, ನಿರ್ಭಯ
ನಾಯಕರು, ವಿಧಾನ ಪರಿಷತ್ ಮಾಜಿ
ಉಪಸಭಾಪತಿಗಳು ಹಾಗೂ ಜನಪ್ರಿಯ
ಮಾಜಿ ಶಾಸಕರಾದ
ಸನ್ಮಾನ್ಯ ಶ್ರೀ ಬಿ.ಆರ್. ಪಾಟೀಲ್
ಅವರಿಗೆ
74ನೇ
ಹುಟ್ಟು ಹಬ್ಬದ
ಹಾರ್ದಿಕ ಶುಭಾಶಯಗಳು

: ಶುಭ ಕೋರುವವರು :
ಸಮಸ್ತ ಶ್ರೀ ಬಿ.ಆರ್. ಪಾಟೀಲ್ ಅಭಿಮಾನಿಗಳ ಬಳಗ ಹಾಗೂ
ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು
ಆಳಂದ ವಿಧಾನ ಸಭಾ ಕ್ಷೇತ್ರ, ಕಲಬುರಗಿ ಜಿಲ್ಲೆ.

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ

ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಎದಂಕಾ ವಿಭಾಗ,
ರೋಡಲಬಂಡಾ-584127 ತಾ: ಲಿಂಗಸುಗೂರು ಜಿ: ರಾಯಚೂರು.

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/2022-23/1566 ದಿನಾಂಕ:-09-11-2022

ಕೊಟೇಶನ್ ಪ್ರಕಟಣೆ

(Through KBJNL website only)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಅಧಿಕೃತ ಡೀಲರಗಳು, ಪೂರೈಕೆದಾರರಿಂದ Consultancy service for survey, investigation, preparation of detailed project report, estimates for filling up of 5 MI tanks of Lingasugur taluk by lifting of water from Narayanpur Reservoir near Navili village of Lingasugur taluk in Raichur District ತಯಾರಕರು / ಡೀಲರುಗಳು ಮಾತ್ರ ದರ ಪಟ್ಟಿ ಒದಗಿಸುವ ಕಾಮಗಾರಿಯ ಎಂಬ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದರಗಳನ್ನು ಒದಗಿಸಲು ಕೊಟೇಶನನ್ನು www.kbjnl.karnataka.gov.in ಮೂಲಕ ಕರೆಯಲಾಗಿದೆ. ಸದರಿ ಕೊಟೇಶನ್‌ನ್ನು ಅರ್ಹ ಅಧಿಕೃತ ಡೀಲರಗಳು, ಪೂರೈಕೆದಾರರು ದಿನಾಂಕ 10.11.2022 ರಿಂದ 21.11.2022 ಮಧ್ಯಾಹ್ನ 2.00 ಗಂಟೆಯವರೆಗೆ www.kbjnl.karnataka.gov.in ನಲ್ಲಿ ವೀಕ್ಷಿಸಿ ಐಟಂವಾರು ದರಗಳನ್ನು ಮೋಹರ್ ಬಂದ್ ಲಕೋಟೆಯಲ್ಲಿ ಭರ್ತಿ ಮಾಡಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಗಳ ದರಪಟ್ಟಿಯನ್ನು ದಿ. 21.11.2022 ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು.

ಆಸಕ್ತ ಅಧಿಕೃತ ಡೀಲರಗಳು, ಪೂರೈಕೆದಾರರಿಂದ ಹೆಚ್ಚಿನ ಮಾವಿತಿಯನ್ನು ಕೃಭಾಜನಿನಿ ವೆಬ್‌ಸೈಟ್ www.kbjnl.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ ರೋಡಲಬಂಡಾ

ವಾ.ಸಾ.ಸಂ.ಇ/ರಾಯಚೂರು/410/ಎಂ.ಸಿ&ಎ/2022-23

ICICI Home Finance

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ - ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಇಂಡಿಯಾ

ಶಾಖಾ ಕಛೇರಿ: 1ನೇ ಮಹಡಿ, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲ್ಬರ್ಗಾ-585105.

[ನಿಯಮ 8(6)ಕ್ಕೆ ಪ್ರೊವಿಸೊಗಳನ್ನು ನೋಡಿರಿ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಗಾರರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ಅಡಮಾನಿತ/ಸುಪರ್ದಿಗೆ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು **ಭೌತಿಕ ಸ್ವಾಧೀನಪಡಿಸಿಕೊಂಡಿದ್ದು** ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ''ಎಲ್ಲಿ ಏನಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನೇನಿದೆಯೋ'' ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)/ ಕಾನೂನು ಉತ್ತರಾಧಿಕಾರಿಗಳ ಹೆಸರು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿ ಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಮಹದೇವಿ ಗೋವಿಂದು (ಸಾಲಗಾರರು), ಗೋವಿಂದು ನರಸಪ್ಪ (ಸಹ-ಸಾಲಗಾರರು), LHGUL00001291506	ಪ್ಲಾಟ್ ಸಂ. 105 ಮತ್ತು 106, ಎಂಪಿಎಲ್ ಸಂ. 12 6 385, ವಿಶ್ವನಾಥ್ ಕಾಲೋನಿ, ಪೋತಿಗಲ್ ರಸ್ತೆ, ರಾಯಚೂರು-584101.	ರೂ. 12,08,055/- 10ನೇ ನವೆಂಬರ್ 2022.	ರೂ. 24,00,000/- ರೂ. 2,40,000/-	13ನೇ ಡಿಸೆಂಬರ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 03:00ರ ವರೆಗೆ	16ನೇ ಡಿಸೆಂಬರ್ ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 03:00ರ ವರೆಗೆ

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ ಆ್ಯಕ್ಷನ್ ಟೈಗರ್ ಮೂಲಕ **(URL Link-https://sarfaesi.auctiontiger.net/EPROC/)** ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ **15ನೇ ಡಿಸೆಂಬರ್ 2022ರ ಸಾಯಂಕಾಲ 5.00ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್ (ಡಿಡಿ)(ಕಾಲಂ ಸಂಖ್ಯೆ ಇ ರಲ್ಲಿ ನಮೂದಿಸಿದಂತೆ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲ್ಬರ್ಗಾ-585105ಗೆ 15ನೇ ಡಿಸೆಂಬರ್ 2022 ರಂದು ಅಥವಾ ಅದಕ್ಕೂ ಮೊದಲು ಸಂಜೆ 04:00ಕ್ಕಿಂತ ಮೊದಲು,** ಯೊಂದಿಗೆ ಸಲ್ಲಿಸಬೇಕು. ದಯವಿಟ್ಟು ಗಮನಿಸಿ, ಒಂದು ವೇಳೆ ನಿರೀಕ್ಷಿತ ಬಿಡ್‌ದಾರರು(ಗಳು) ಮೇಲೆ ತಿಳಿಸಿದ ಸಮಯದ ಪ್ರಕಾರ ತಮ್ಮ ಪ್ರಸ್ತಾಪವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಪ್ರತಿಗೆ ಸಹಿ ಮಾಡಿ ಟೆಂಡರ್ ದಾಖಲೆಗಳನ್ನು ಐಸಿಐಸಿಐ **ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಡಾ. ಸವಿತಾ ಕಮರ್ಷಿಯಲ್ ಕಾಂಪ್ಲೆಕ್ಸ್, ಐಡಿಯಾ ಶೋರೂಂ ಮೇಲೆ, 2/907/23/2, ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲ್ಬರ್ಗಾ-585105ಗೆ** ಇಲ್ಲಿಗೆ **15ನೇ ಡಿಸೆಂಬರ್ 2022 ರಂದು ಅಥವಾ ಅದಕ್ಕೂ ಮೊದಲು ಸಂಜೆ 05:00ಕ್ಕಿಂತ ಮೊದಲು ಸಲ್ಲಿಸಬಹುದು.** ಇಎಂಡಿಗಾಗಿನ ಅರ್ನೆಸ್ಟ್ ಮನಿ ಡಿಪಾಸಿಟ್ (ಡಿಡಿ) ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ ''**ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು**'', ರಾಯಚೂರು ರವರ ಪದನಾಮಕ್ಕೆ ಪಾವತಿಯಾಗುವಂತಿರಬೇಕು.

ಇತರೆ ಯಾವುದೇ ಸ್ಪಷ್ಟನೆಗಾಗಿ ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರೆ ಯಾವುದೇ ಸ್ಪಷ್ಟನೆಗಳಿಗಾಗಿ ದಯವಿಟ್ಟು ಐಸಿಐಸಿಐ **ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಮೊಬೈಲ್ ಸಂ.7021072869.** ಅಥವಾ ನಮ್ಮ ಮಾರಾಟ ಮತ್ತು ಮಾರುಕಟ್ಟೆ ಪಾಲುದಾರ ನೆಕ್ಸನ್ ಸೊಲ್ಯೂಷನ್ ಪ್ರವೇಟ್ ಲಿಮಿಟೆಡ್ ಅನ್ನು ಸಂಪರ್ಕಿಸುವುದು.

ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ/ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಬಹುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್‌ಗೆ **https://www.icicihfc.com/** ಭೇಟಿ ಮಾಡಿ.

ದಿನಾಂಕ : ನವೆಂಬರ್ 15, 2022
ಸ್ಥಳ : ರಾಯಚೂರು

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

34ನೇ ಪುಣ್ಯಸ್ಮರಣೆ

ದಿ. ಪೂಜ್ಯ ಶ್ರೀ ಬಾಪುಗೌಡ ದರ್ಶನಾಪೂರ
ಮಾಜಿ ಸಚಿವರು, ಶಹಾಪುರ
ಇಂದು ದಿನಾಂಕ : 15-11-2022 ರಂದು ಕಲ್ಯಾಣ ಕರ್ನಾಟಕದ ಜನಪ್ರಿಯ ನಾಯಕರು ದೀನ ದುರ್ಬಲರ ಧ್ವನಿಯಾಗಿ, ಜನ ಸಾಮಾನ್ಯ ವರ್ಗದವರ ಪ್ರೀತಿಗೆ ಪಾತ್ರರಾಗಿದ್ದ ದಿ. ಬಾಪುಗೌಡ ದರ್ಶನಾಪುರ ಅವರ 34 ನೇ ಪುಣ್ಯಸ್ಮರಣೆ ಅಂಗವಾಗಿ ಬೆಳಿಗ್ಗೆ 9.30ಕ್ಕೆ ಭೀಮರಾಯನಗುಡಿ ವೃತ್ತದಲ್ಲಿರುವ ದಿ. ಬಾಪುಗೌಡರ ಪುತ್ಥಳಿಗೆ ಮಾಲಾರ್ಪಣೆ ನಂತರ ಶ್ರೀ ಚರಬಸವೇಶ್ವರ ಪ್ರೌಢಶಾಲೆಯ ಆವರಣದಲ್ಲಿ 10.00 ಗಂಟೆಗೆ ಪುಣ್ಯಸ್ಮರಣೆ ಕಾರ್ಯಕ್ರಮಗಳು ಜರುಗುವವು.
ಸಾನಿಧ್ಯ: ಶ್ರೀ ವೇದಮೂರ್ತಿ ಬಸವಯ್ಯ ಶರಣರು
ಶ್ರೀ ಚರಬಸವೇಶ್ವರ ಸಂಸ್ಥಾನಮಠ, ಶಹಾಪೂರ
ಈ ಕಾರ್ಯಕ್ರಮದಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಹಾಗೂ ಹಿತೈಷಿಗಳು ಭಾಗವಹಿಸಬೇಕೆಂದು ವಿನಂತಿ.
ಶ್ರೀ ಬಸವರಾಜಪ್ಪಗೌಡ ದರ್ಶನಾಪುರ,
ಶ್ರೀ ಶರಣಬಸಪ್ಪಗೌಡ ದರ್ಶನಾಪುರ,
ಶಾಸಕರು, ಮಾಜಿ ಸಚಿವರು ಶಹಾಪುರ,
ಡಾ|| ಸುದತ್ತ ದರ್ಶನಾಪುರ,
ಶ್ರೀ ಅಮರೇಶಗೌಡ ದರ್ಶನಾಪುರ
ದರ್ಶನಾಪುರ ಪರಿವಾರ ಹಾಗೂ ಬಂಧು ಮಿತ್ರರು

ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಸನ.

ಕೈಗಾರಿಕಾ ಕ್ಷೇತ್ರ, ಅಂಚೆ ಪೆಟ್ಟಿಗೆ ಸಂಖ್ಯೆ-120, ಬಿ.ಎಂ.ರಸ್ತೆ, ಹಾಸನ- 573201.
PH NO : 08172-240631 FAX: 08172-240640
E-mail Address: hamul77@yahoo.co.in

ಸಂ.ಹಾಸಹಾಒ/ ಪ್ರವ್ಯ(ಹಾಂ)/ಅಧಿ/ಇ-ಟೆಂಡರ್/4548/2022-23 ದಿನಾಂಕ:07.11.2022

ಟೆಂಡರ್ ಪ್ರಕಟಣೆ(ಮರು ಟೆಂಡರ್): (ಅಲ್ಪಾವಧಿ ಟೆಂಡರ್)

ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಐಸ್‌ಕ್ರೀಂ ಘಟಕದಲ್ಲಿ ರೆಫ್ರಿಜರೇಷನ್ ವಿಸ್ತರಣೆಗೆ ಸಂಬಂಧಿಸಿದಂತೆ ಇ-ಟೆಂಡರ್ ಆಹ್ವಾನಿಸಲಾಗಿದ್ದು, ಇ-ಟೆಂಡರ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.11.2022 ರ ಸಂಜೆ 05:00 ಘಂಟೆಯವರೆಗೆ. ಇ-ಟೆಂಡರ್‌ನಲ್ಲಿ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 28.11.2022 ರ ಸಂಜೆ 03:00 ಘಂಟೆಯ ನಂತರ. ಆಸಕ್ತಿಯುಳ್ಳ ಟೆಂಡರುದಾರರು ಮೇಲ್ಕಾಣಿಸಿದ ಯಂತ್ರೋಪಕರಣಗಳ ಸರಬರಾಜಿಗೆ ಸಂಬಂಧಿಸಿದಂತೆ ಟೆಂಡರ್‌ನಲ್ಲಿ ಭಾಗವಹಿಸಲು ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಇ-ಟೆಂಡರ್‌ನ ವೆಬ್ ವಿಳಾಸ: **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಇ.ಎಂ.ಡಿ ಮೊತ್ತವನ್ನು ಕರ್ನಾಟಕ ಸರ್ಕಾರದ **e-procurement Portal** ಮೂಲಕ ಸಂದಾಯವಾಗುವಂತೆ ಸಲ್ಲಿಸಬೇಕಾಗಿರುತ್ತದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು